MYSORE LEGISLATIVE ASSEMBLY

FIRST SESSION.

FORTY-THIRD DAY.

Friday, 3rd August 1962

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Provision made for building houses at Chunchi Colony.

*Q.—9. Sri S. KARIAPPA (Kanakapura).—

Will the Government be pleased to state :—

(*a*) whether any provision had been made for house building at Chunchi colony ;

(*b*) whether it has come to their notice that excavation of foundation of buildings and in some cases basement work have already been done ?

.—Smt. YASHODHARA DASAPPA (Minister for Social Welfare).—

(*a*) Yes.

(*b*) No.

ಶ್ರೀ ಎಸ್. ಕರಿಯಪ್ಪ.—ಇದಕ್ಕೆ ಹಣವನ್ನು ಯಾವ ವರ್ಷ ಒದಗಿಸಲಾಗಿತ್ತು ?

†ಶ್ರೀಮತಿ ಯಶೋಧರ ದಾಸಪ್ಪ.—1958-59 ರಲ್ಲಿ.

ಶ್ರೀ ಎಸ್. ಕರಿಯಪ್ಪ.—ಅದರಲ್ಲಿ ಎಷ್ಟು ಖರ್ಚಾಗಿದೆ ?

ಶ್ರೀಮತಿ ಯಶೋಧರ ದಾಸಪ್ಪ.—13,900 ರೂಪಾಯಿಗಳು.

ಶ್ರೀ ಎಸ್. ಕರಿಯಪ್ಪ.—Shortage ಎಷ್ಟಿತ್ತು ?

ಶ್ರೀಮತಿ ಯಶೋಧರ ದಾಸಪ್ಪ.—ಅಲಾಟ್‌ಮೆಂಟ್ ಮಾಡಿದ್ದುದು 22,250 ರೂಪಾಯಿಗಳು.

ಶ್ರೀ ಎಸ್. ಕರಿಯಪ್ಪ.—ಈಗ ಖರ್ಚಾಗಿರುವ 13,900 ರೂಪಾಯಿಗಳಿಂದ ಎಷ್ಟು ಭಾಗ ಕೆಲಸ ನಡೆದಿದೆ ?

ಶ್ರೀಮತಿ ಯಶೋಧರ ದಾಸಪ್ಪ.—13,900 ರೂಪಾಯಿಗಳಿಂದ ಎತ್ತುಗಳನ್ನು ಕೊಂಡಿದ್ದಾರಲ್ಲದೆ ಒಂದು ಬಾವಿ ಮತ್ತು ಒಂದು ಕಮ್ಯೂನಿಟಿ ಸೆಂಟರನ್ನು ಮಾಡಿದೆ.

ಶ್ರೀ ಎಸ್. ಕರಿಯಪ್ಪ.—ಮನೆಯನ್ನು ಕಟ್ಟುವುದಕ್ಕಾಗಿ ಎಷ್ಟು ಹಣ ಒದಗಿಸಿತ್ತು, ಅದರಲ್ಲಿ ಎಷ್ಟು ಖರ್ಚಾಗಿದೆ?

ಶ್ರೀಮತಿ ಯಶೋಧರ ದಾಸಪ್ಪ.—8,000 ರೂಪಾಯಿಗಳು.

ಶ್ರೀ ಎಸ್. ಕರಿಯಪ್ಪ.—ಎಷ್ಟು ಮನೆಗಳಿಗೆ ?

ಶ್ರೀಮತಿ ಯಶೋಧರ ದಾಸಪ್ಪ.—ಇಪ್ಪತ್ತು ಮನೆಗಳಿವೆ.

ಶ್ರೀ ಎಸ್. ಕರಿಯಪ್ಪ.—ಎಷ್ಟು ಮನೆಗಳಾಗಿವೆ ?

ಶ್ರೀಮತಿ ಯಶೋಧರ ದಾಸಪ್ಪ.—ಒಂದೂ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಇದನ್ನು ಕೊಡುವ ಸಂದರ್ಭದಲ್ಲಿ ಅವರು ಅಡಿಪಾಯವನ್ನು ಕಟ್ಟಿದ್ದರೆ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಮನೆಗಳಿಗೆ ಗ್ಯಾರಂಟು ಕೊಡಬೇಕಾಗಿದ್ದರೆ ಅರ್ಜಿದಾರರು ಮೊದಲು ಅಡಿಪಾಯ ಹಾಕಬೇಕೆಂದು ನಿಗದಿಯಾಗಿದೆ. ಅದರ ಪ್ರಕಾರ ಮಾಡದೆ ಇದ್ದುದರಿಂದ ಕೊಟ್ಟಿಲ್ಲ.

ಶ್ರೀ ಎಸ್. ಕರಿಯಪ್ಪ.—ಯಾರಾದರೂ ನೋಡಿ ರಿಪೋರ್ಟ್ ಮಾಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ನೋಡಿ ರಿಪೋರ್ಟ್ ಮಾಡಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಅಲ್ಲಿರುವವರು ಪ್ರತಿಯೊಬ್ಬರೂ ಅಡಿಪಾಯ ಹಾಕಿಕೊಂಡು ಮೂರು, ನಾಲ್ಕು ವರ್ಷವಾಗಿದ್ದರೂ ಅವರಿಗೆ ಹಣ ಕೊಡದಿರುವುದರಿಂದ ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ – ನಮ್ಮಲ್ಲಿರುವ ರಿಕಾರ್ಡ್ಸ್ ಪ್ರಕಾರ ಇವತ್ತಿನವರೆಗೂ ಅವರು ಅಡಿಪಾಯ ಹಾಕಿಲ್ಲ. ಈಗ ನೀವು ಹೇಳಿದ ಮೇಲೆ ಅದನ್ನು ಮತ್ತೆ ವಿಚಾರಿಸುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಆ ವರದಿಯ ತಾರೀಖೆಷ್ಟು ?

ಶ್ರೀಮತಿ ಯಶೋಧರ ದಾಸಪ್ಪ.—28 ಜುಲೈ 1962.

†Indicates that the remarks or speeches have not been revised by the member concerned.

ಶ್ರೀ ಎಸ್.ಎಂ.ಕೃಷ್ಣ.—ಹಾಗೆ ಒಂದು ಪಕ್ಷಪಾತಿ ವರದಿಯಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Smt. YASHODHARA DASAPPA.—That is a suggestion for action.

ಶ್ರೀ ವೈ. ರಾಮಚಂದ್ರ.—ಈ ಹಣವನ್ನು ಯಾವ ಯೋಜನೆಯಿಂದ ಕೊಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಅಮಿಲಯೊರೇಷನ್ ಸ್ಕೀಮಿನಿಂದ.

ಶ್ರೀ ವೈ. ರಾಮಚಂದ್ರ.—ಇದು ಗ್ರಾಂಟ್ ಎಂತಲೇ ಅಥವಾ ಲೋನ್ ಎಂತಲೋ ?

ಶ್ರೀಮತಿ ಯಶೋಧರ ದಾಸಪ್ಪ.—ಈ Agricultural Colonisation Scheme ನಿಂದ ಪೂರ್ತಿ ಗ್ರಾಂಟ್ ರೂಪವಾಗಿ ಕೊಡಬೇಕೆಂದಿದೆ.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ಕಟ್ಟಡವನ್ನು ಪೂರ್ತಿಯಾಗಿ ಕಟ್ಟುವುದಕ್ಕೆ ತಾವು ಹಣ ಕೊಡುತ್ತೀರೋ ಇಲ್ಲವೋ ಎಂಬ ಅನುಮಾನದ ಮೇಲೆ ತಾನೆ ಅವರು ಇದುವರೆಗೂ ಮನೆ ಕಟ್ಟಿಲ್ಲ ?

ಶ್ರೀಮತಿ ಯಶೋಧರ ದಾಸಪ್ಪ.—'Basement' ಕಟ್ಟಿದ್ದಾರೆಂದು ನಾನು ಒಪ್ಪಲೇ ಇಲ್ಲ.

Payment of compensation to the land-owners whose lands are acquired for Minor Irrigation Tanks in Mundargi Taluk.

*Q.—212. Sri C. S. HULKOTI (Mundargi).—

Will the Government be pleased to state :—

(*a*) whether they are aware that the compensation amount has not been paid to the land-owners whose lands have been acquired for the purpose of Minor Irrigation Tanks (i) at Jantli Sirur and (ii) Tambragundi in Mundargi taluk, up till now even though four years have elapsed after taking over the possession of the lands for the said purpose by the Government ;

(*b*) the reasons for the delay in paying compensation to the land-owners ;

(*c*) whether it has come to their notice that the owners are put to great hardship on account of non-payment of compensation till now ;

(*d*) whether they are aware that though repeated requests are made by the said owners for payment of compensation, the matter is being delayed ;

(*e*) whether they intend to take steps to pay the amount of compensation immediately ?

A.—Sri M. V. KRISHNAPPA (Minister for Revenue).—

(*a*) Yes.

(*b*) The land acquisition proceedings are not yet finalised.

(*c*) No.

(*d*) No requests for the payment of compensation have been made by the owners of the lands.

(*e*) Yes.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಕೆರೆಗಳ ವಿಷಯದಲ್ಲಿ ಇನ್ನೂ ನೋಟಿಫಿಕೇಷನ್ ಆಗಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಂಬ್ರಗುಂಡಿ ಕೆರೆಯ ವಿಷಯದಲ್ಲಿ ಆಗಿದೆ. ಇನ್ನು ಹದಿನೈದು ದಿವಸಗಳಲ್ಲಿ ಪರಿಹಾರವನ್ನು ಕೊಡುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಬಗ್ಗೆ ರಿಕಾರ್ಡ್‌ಗಳು ಈಗ ಎಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡೆಪ್ಯುಟಿ ಕಮಿಷನರು–ಅಸಿಸ್ಟೆಂಟ್ ಕಮಿಷನರು ಇವರುಗಳ ಮಧ್ಯೆ ಇದೆ.

ಶ್ರೀ ಸಿ. ಎಸ್. ಹುಲ್ಕೋಟಿ.—Finalise ಆಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಗುತ್ತದೆ.

ಶ್ರೀ ಟಿ.ಕೆ.ಕಂಬಳಿ.—ಹದಿನೈದು ದಿವಸಗಳಲ್ಲಿ ಇದು ಆಗುವುದು ನಿಶ್ಚಯವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಬರೆದಿದ್ದೇನೆ. ಬಹುಶಃ ಕೊಡಬಹುದು. ಇಲ್ಲದಿದ್ದರೆ ಮತ್ತೆ ಬರೆದು ಹೇಳುತ್ತೇನೆ.

ಶ್ರೀ ಟಿ.ಕೆ.ಕಂಬಳಿ.—ಈ ಬಗ್ಗೆ ಮತ್ತೆ ಮತ್ತೆ ಕೇಳುತ್ತಿದ್ದರೂ ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿನ ಸಂಬಂಧಪಟ್ಟ ಎಂ.ಎರ್.ಎ. ಗಳು ಪತ್ರ ಬರೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಟಿ.ಕೆ. ಕಂಬಳಿ.—ಜಿಗಳೂರು ಕೆರೆಯ ವಿಷಯದಲ್ಲಿ ಯಾವಾಗ ನೋಟಿಫಿಕೇಷನ್ ಆಗುತ್ತದೆ ?

ಶ್ರೀ ಎಂ.ವಿ. ಕೃಷ್ಣಪ್ಪ.—ಸಾಧ್ಯವಾದಷ್ಟು ಬೇಗನೆ ಮಾಡುವುದಕ್ಕೆ ಹೇಳುತ್ತೇನೆ. Joint Survey ಆಗಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಕೆ. ಕಂಬಳಿ.—ಎಷ್ಟು ಎಕರೆಗಳನ್ನು ಈಗ ಸ್ವಾಧೀನ ಪಡಿಸಿಕೊಂಡಿದ್ದೀರಿ ? ಅದು ಯಾವ ದರದಲ್ಲಿ ?

ಶ್ರೀ ಎಂ. ವಿ. ಕೃಷ್ಣಪ್ಪ.— ಪ್ರಿಲಿಮಿನರಿ ನೋಟಿಫಿಕೇಷನ್ ಪ್ರಕಾರ 238 ಎಕರೆ 18 ಗುಂಟೆ ಮುಳುಗಡೆಯಾಗುತ್ತದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತೀರಾ ? ಬಹಳ ವರ್ಷಗಳಿಂದ ರೈತರು ಕಷ್ಟಪಡುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ; ಕಷ್ಟವಾಗುತ್ತದೆ. ಆದಷ್ಟು ಬೇಗನೆ ಕೊಡಿಸುತ್ತೇವೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಇಂಟೆರಿಮ್ ರಿಲೀಫ್ ಕೊಡುವುದಕ್ಕೇನಾದರೂ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಕ್ವಿಸಿಷನ್ ಕೇಸಿನಲ್ಲಿ ಅವಾರ್ಡ್ ಆಗುವವರೆಗೂ ನಾವು ಏನೂ ಮಾಡುವು